
## ಮಾತು-ಕತೆ

ಸಮಯದಲ್ಲಿಯೇ ಶೂಟಿಂಗ್ ಮುಗಿಸಿದ್ದೆ. ಆದರೆ ನಿರ್ದೇಶಕನಾಗುವಂತೆ ನನಗೆ ಮೊದಲು ಆಫರ್ ನೀಡಿದ್ದು ಡಾ. ಅಶೋಕ್ ಪೈ. ಅವರು 'ಕಾಡಿನಬೆಂಕಿ' ಚಿತ್ರವನ್ನು ನಿರ್ದೇಶಿಸಲು ಒತ್ತಾಯಿಸಿದ್ದರು. ನನಗೆ ಆತ್ಮವಿಶ್ವಾಸವಿರಲಿಲ್ಲ. ಅಶೋಕ್ ಅವರಿಗೆ ಸುರೇಶ್ ಹೆಬ್ಳೀಕರ್ ಅವರನ್ನು ಪರಿಚಯಿಸಿದೆ. ಆ ಚಿತ್ರಕ್ಕೆ ನಾನು ಚಿತ್ರಕಥೆ ಬರೆದೆ. ಕೋಡ್ಲು ರಾಮಕೃಷ್ಣರ 'ಉದ್ಭವ'ಕ್ಕೆ ಚಿತ್ರಕತೆ, ಸಂಭಾಷಣೆ, ಹಾಡುಗಳನ್ನು ಬರೆದೆ. ನಾನೇ ಬರೆಯಬೇಕು ಎಂದು ಬಿ.ವಿ. ವೈಕುಂಠರಾಜು ಸೂಚಿಸಿದ್ದರಂತೆ. ಆ ಚಿತ್ರಕಥೆ ಅನಂತ್‌ನಾಗ್ ಅವರಿಗೆ ತುಂಬಾ ಇಷ್ಟವಾಯಿತು. 'ಎಷ್ಟೊಂದು ಚೆನ್ನಾಗಿ ಬರೆಯುತ್ತೀರಿ. ನೀವು ನಿರ್ದೇಶನವನ್ನೂ ಮಾಡಬೇಕು' ಎಂದು ಒತ್ತಾಯಿಸಿದರು. ಅದೇ ಸಮಯದಲ್ಲಿ ನನ್ನ ಪತ್ನಿ ಉದ್ಯೋಗನಿಮಿತ್ತ ಅಮೆರಿಕದಲ್ಲಿದ್ದರು. ಅಲ್ಲಿಗೆ ತೆರಳಿದ ನಾನು, ಸುಮಾರು ಒಂದು ವರ್ಷ ಕಾಲ ಸಿನಿಮಾ ವ್ಯಾಕರಣಕ್ಕೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ಅಧ್ಯಯನ ಮಾಡಿದೆ. ಅಲ್ಲಿಂದ ಬಂದಮೇಲೆ ಬೆಸಗರಹಳ್ಳಿ ರಾಮಣ್ಣನವರ 'ಸುಗ್ಗಿ' ಕಥೆಯನ್ನು ದೂರದರ್ಶನಕ್ಕಾಗಿ ಕಿರುಚಿತ್ರ ಮಾಡಿದೆ. ಆನಂತರ ಕೆಲವು ಸಾಕ್ಷ್ಯಚಿತ್ರಗಳನ್ನು ಮಾಡಿದೆ. ಇದೆಲ್ಲ ಸಿನಿಮಾಕ್ಕೆ ತಯಾರಿ ಎನ್ನಬಹುದು. ಆ ವೇಳೆಗೆ 'ಉದ್ಭವ' ಶತದಿನ ಪ್ರದರ್ಶನ ಕಂಡು, ನನಗೆ ಅತ್ಯುತ್ತಮ ಸಂಭಾಷಣೆಕಾರ ರಾಜ್ಯಪ್ರಶಸ್ತಿಯೂ ಬಂದಿತ್ತು. ಅದೇ ಚಿತ್ರದ ನಿರ್ಮಾಪಕರು ಸಿನಿಮಾ ಮಾಡಿಕೊಡುವಂತೆ ಕೇಳಿದಾಗ, ನನ್ನದೇ ಕಥೆಯನ್ನು ಆಧರಿಸಿ 'ಉಂಡೂ ಹೋದ ಕೊಂಡೂ ಹೋದ' ಸಿನಿಮಾ ರೂಪಿಸಿದೆ.

● **ಲೇಖಕರು ಸಿನಿಮಾ ಮಾಡಿರುವ ಉದಾಹರಣೆಗಳು ಕನ್ನಡದಲ್ಲಿ ಸಾಕಷ್ಟಿವೆ. ಆದರೆ,**



ಬರವಣಿಗೆ, ಸಿನಿಮಾ ನಿರ್ದೇಶನ, ಗೀತರಚನೆ, ಸಂಘಟನೆ, ಅಧ್ಯಾಪನ – ಹೀಗೆ ನಾಲ್ಕಾರು ಕ್ರಿಯಾಶೀಲ ರಂಗಗಳಲ್ಲಿ ತೊಡಗಿಸಿಕೊಂಡಿರುವ ನಾಗತಿಹಳ್ಳಿ ಚಂದ್ರಶೇಖರ ಅವರ ಮೂಲಸೆಲೆ ಕತೆ ಹೇಳುವುದು. ಒಂಬತ್ತು ಕಥಾಸಂಗ್ರಹಗಳು, ಮೂರು ಕಾದಂಬರಿಗಳು, ಆರು ಪ್ರವಾಸ ಕಥನಗಳು, 11 ಅಂಕಣಬರಹಗಳ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನಿರ್ದೇಶಿಸಿರುವ ಸಿನಿಮಾಗಳು 13.